

# ಮಗನಿದ್ದು ಫಲವೇನು?

■ ಬಸು ಬೇವಿನಗಿಡದ

ಈ ಸಲ ಯುಗಾದಿ ಯಾವಾಗ ಬರುವುದೋ ಎಂದು ಪರಮೇಶಿ ಕಾಯುತ್ತಿದ್ದ. ಮ್ಯಾಟ್ರಿಕ್ ಮುಗಿಯುತ್ತದೆ ಎಂಬುದು ಒಂದು ಕಾರಣವಾದರೆ ತಾನೂ ತಾಯಿಯೊಡನೆ ಮಾವಿನಕಾಯಿ ಇಳವುಲಿಕ್ಕೋ ಅಥವಾ ಮತ್ತಾವುದೋ ದುಡಿಮೆಗೆ ಹೋಗಬಹುದೆಂಬುದು ಮತ್ತೊಂದು ಕಾರಣವಾಗಿತ್ತು. ದಸರಾ, ದೀಪಾವಳಿ, ಸಂಕ್ರಾಂತಿ ಅಂತ ಯಾವುದೇ ಹಬ್ಬ ಬರಲಿ ಆತನಿಗೆ ಮಾವಿನ ತಳಿರು ತಂದು ಅದನ್ನು ಮನೆಗೆ ತೋರಣವಾಗಿಸುವುದೆಂದರೆ ಸಂಭ್ರಮವೋ ಸಂಭ್ರಮ. ಅವನ ಮುಖದ ತುಂಬ ಹಬ್ಬುವ ನಗೆಯನ್ನು ಕಂಡಾಗಲೆಲ್ಲ ಚೈತ್ರ ಮನೆಯಲ್ಲಿ ಪಲ್ಲವಿಸುತ್ತಿರುವಂತೆ ತೋರುತ್ತಿತ್ತು.

ಹಬ್ಬ ಒಂದು ವಾರ ಇರುವಾಗಲೇ ಅವನ ಕಣ್ಣುಗಳಲ್ಲಿ ಕಾಣಿಸುವ ಅಪೇಕ್ಷೆಗಳನ್ನು ನೋಡಬೇಕು. ತಾಯಿಗೆ ನೆರವು ನೀಡಬೇಕೆಂದಾಗ ಅವನಲ್ಲಿ ಉಕ್ಕುವ ಉತ್ಸಾಹವನ್ನು ಕಾಣಬೇಕು. ತಾಯಿ ಮಗ ಕೂಡಿ ಮನೆಯನ್ನು ಸಿಂಗರಿಸಿಯೇ ಸಿಂಗರಿಸುತ್ತಿದ್ದರು. ದೀಪಾವಳಿಯಲ್ಲಿ ಮಗನು ತರುವ ತರತರದ ಹೂವು, ಉತ್ತರಾಣಿ ಕಡ್ಡಿ, ಅವನು ಕಟ್ಟುತ್ತಿದ್ದ ಚೆಂಡು ಹೂವಿನ ಮಾಲೆ, ಅವನು ಅಂಗಳದಲ್ಲಿ ಇಡುವ ಪಾಂಡವರ ಪ್ರತಿಮೆಗಳು, ಥೇಟ್ ಬಂಗಾರದ್ದೇ ಅನ್ನಿಸುವಂತಹ ಹಳದಿಯ ಹೊನ್ನಿ ಹೂವುಗಳಿಂದ ಅವುಗಳಿಗೆ ಮಾಡುತ್ತಿದ್ದ ಅಲಂಕಾರಗಳು ಎಂತಹವರ ಮುಖದಲ್ಲಿಯೂ ಬೆರಗು ಮೂಡಿಸುತ್ತಿದ್ದವು. ಸುಣ್ಣಕೆಮ್ಮಣ್ಣಿನಲ್ಲಿ ಅದ್ದಿದ ಪಾಂಡವರ ಪಾದದ ಗುರುತುಗಳು